ಇನ್ನು 8-10 ದಿವಸಗಳಲ್ಲಿ ನಮ್ಮ ಅಧಿಕಾರಗಳನ್ನು ಕರೆಸಿ ಎರಡನೇ ಹಂತದ ಕಾಮಗಾರಿಯನ್ನೂ ಕೂಡ ನಾವು ತಕ್ಷಣವೇ ಪ್ರಾರಂಭ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ.

ಕೆ.ಆರ್. ಪೇಟೆ ತಾಲ್ಲೂಕಿನಲ್ಲಿ ನೀರಿನ ಕಾಲುವೆಗಳು

403 - ಶ್ರೀ ಬಿ. ಪ್ರಕಾಶ್ (ಕೆ.ಆರ್. ಪೇಟೆ) : ಮಾನ್ಯ ಭಾರಿ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೆ.ಆರ್. ಪೇಟೆ ತಾಲ್ಲೂಕಿನ ಹಳೆಯ ನಾಲೆಗಳಾದ ಹೇಮಗಿರಿ, ಮಂದಗೆರೆ ಎಡದಂಡೆ ನಾಲಾಗಳು ಮತ್ತು ರಾಮದೇವರ ನಾಲೆಗಳು ಬಹಳ ಹಳೆಯದಾಗಿದ್ದು ಕೊನೆಯ ಭಾಗದ ಅಚ್ಚುಕಟ್ಟು ಪ್ರದೇಶಕ್ಕೆ ನೀರಿಲ್ಲದೆ ರೈತರು ಬವಣೆ ಪಡುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ ಈ ನಾಲೆಗಳನ್ನು ಆಧುನೀಕರಣಗೊಳಿಸಲು ಸರ್ಕಾರವು ಕ್ರಮ ಕೈಗೊಂಡಿದೆಯೇ?

ಶ್ರೀ ಕೆ.ಎನ್. ನಾಗೇಗೌಡ (ಭಾರಿ ನೀರಾವರಿ ಸಚಿವರು) :

ಅ) ಹೌದು.

ಆ) ಪರಿಶೀಲಿಸಲಾಗುವುದು.

ಶ್ರೀ ಬಿ. ಪ್ರಕಾಶ್ : ಮಾನ್ಯ ಉಪಾಧ್ಯಕ್ಷರೆ, ಜನತಾದಳ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ನೀರಾವರಿಗೆ ಹೆಚ್ಚು ಆಧ್ಯತೆಯನ್ನು ಕೊಟ್ಟು ಪ್ರತಿವರ್ಷ ಸಾವಿರಾರು ಕೋಟಿ ರೂಪಾಯಿಗಳನ್ನು ವೆಚ್ಚ ಮಾಡುತ್ತಿರುವಂಥದ್ದು ಪ್ರಶಂಸನೀಯ. ಜೊತೆಗೆ ಮಂಡ್ಯಜಿಲ್ಲೆಯ ಜೀವನಾಡಿಯಾದ ವಿಶ್ವೇಶ್ವರಯ್ಯ ನಾಲೆಯನ್ನು ಆಧುನೀಕರಣ ಮಾಡಿ ರೈತರ ಮೆಚ್ಚುಗೆಗೆ ಪಾತ್ರರಾಗಿದ್ದೀರಿ, ಆದರೆ ನಮ್ಮ ಕೆ.ಆರ್. ಪೇಟೆ ತಾಲ್ಲೂಕಿನ ಸುಮಾರು 200-300 ವರ್ಷಗಳ ಹಳೆಯದಾದ ನಾಲೆಗಳು ಅಂದರೆ ಹೇಮಗಿರಿ ನಾಲಾ, ಮಂದಗೆರೆ ಎಡದಂಡೆ, ಬಲದಂಡೆ ನಾಲೆಗಳು, ಮತ್ತು ಶ್ರೀರಾಮದೇವರ ಉತ್ತರ ನಾಲೆಗಳು ತುಂಬಾ ಕೆಟ್ಟ ಸ್ಥಿತಿಯಲ್ಲಿದ್ದು ಈ ಕಾಲುವೆಗಳು ತಮ್ಮ ಸ್ವರೂಪವನ್ನೇ ಕಳೆದುಕೊಂಡಿದ್ದಾವೆ. ಜೊತೆಗೆ ಈ ನಾಲೆಯ ಕೊನೆಯ ಭಾಗದ ಅಚ್ಚುಕಟ್ಟು ಪ್ರದೇಶಕ್ಕೆ ನೀರು ಬರದೆ ರೈತರು ಕಂಗಾಲಾಗಿದ್ದಾರೆ. ಈ ನಾಲೆಯ ಅಚ್ಚುಕಟ್ಟು ಸುಮಾರು 15 ಎಕರೆ ಇದ್ದು ಇದರಲ್ಲಿ ಸುಮಾರು ಐದು ಸಾವಿರ ಎಕರೆಗೆ ನೀರು ಬಾರದೆ ತೊಂದರೆಯಾಗಿದೆ. ಇದಕ್ಕೆ ರೈತರು ಕಷ್ಟಪಟ್ಟು ರಾತ್ರಿವೇಳೆಯಲ್ಲಿ ಹೊಡೆದಾಟ ಮಾಡಿಕೊಂಡು ಹಾವುಗಳಕೈಯಲ್ಲಿ ಕಚ್ಚಿಸಿಕೊಂಡು ನೀರನ್ನು ಹಾಯಿಸುವಂತಹ ಪರಿಸ್ಥಿತಿ ಒದಗಿಬಂದಿದೆ. ಆ ಕಾರಣಕ್ಕಾಗಿ ನಾನು ಸರ್ಕಾರದಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ಸ್ವಾತಂತ್ರ್ಯ ಬಂದು ಇಂದಿಗೆ 50 ವರ್ಷಗಳ ಸುವರ್ಣ ಮಹೋತ್ಸವವನ್ನು ಆಚರಿಸುವಂತಹ ಸಂದರ್ಭದಲ್ಲಿ ನಮ್ಮ ರೈತರಿಗೆ ನಿಜವಾಗಿ ಸ್ವಾತಂತ್ರ್ಯವನ್ನು ತಂದುಕೊಡುತ್ತೀರೆಂದು ನಮ್ಮವರೇ ಆದ ನೀರಾವರಿ ಸಚಿವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಅದಕ್ಕೆ ಮಾನ್ಯ ಮಂತ್ರಿಗಳು ಪರಿಶೀಲನೆ ಮಾಡಲಾಗುವುದು ಎಂಬ ಮಾತನ್ನು ಹೇಳಿದ್ದಾರೆ. ಈ ಪರಿಶೀಲನೆ ಯಾವಹಂತದಲ್ಲಿದೆ, ಹಾಗೂ ಇದಕ್ಕೇನಾದರೂ ಎಸ್ಟಿಮೇಟ್‌ನ್ನು

ತಯಾರಿಸಿದ್ದಾರೆಯೇ? ಇದಕ್ಕೆ ಎಷ್ಟು ಹಣ ಖರ್ಚಾಗುತ್ತದೆ, ಹಣವನ್ನು ಎಲ್ಲಿಂದ ತರುತ್ತೀರಾ? ಯಾವಾಗ ಕೆಲಸವನ್ನು ಶುರು ಮಾಡುತ್ತೀರಾ ಎಂದು ಮಾನ್ಯ ಮಂತ್ರಿಗಳಲ್ಲಿ ಕೇಳುತ್ತಿದ್ದೇನೆ.

ಶ್ರೀ ಕೆ.ಎನ್. ನಾಗೇಗೌಡ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಪ್ರಕಾಶ್‌ರವರು ಕೇಳಿರತಕ್ಕ ಪ್ರಶ್ನೆಗೆ ಉತ್ತರವನ್ನು ಈಗಾಗಲೇ ಒದಗಿಸಿದ್ದೇನೆ. ಅದರಲ್ಲಿ 10380 ಹೆಕ್ಟೇರ್ ಪ್ರದೇಶ ಹಳೆ ನಾಲೆಗಳಲ್ಲಿ ಬರತಕಥದ್ದು ಇದೆ. ಅವರು ಹೇಳತಕ್ಕಂಥದ್ದು ನಿಜ ಈ ನಾಲೆಗಳು ಏನಿದೆ ಇವು ನೂರಾರು ವರ್ಷಗಳದ್ದು. ಅದಕ್ಕೆ ಅವರು ಏನು ಮಾಡುತ್ತೀರಿ ಎಂಬ ಪ್ರಶ್ನೆಯನ್ನು ಕೇಳಿದ್ದಾರೆ. ಹಿಂದೆ ನಮ್ಮ ಮುಖ್ಯಮಂತ್ರಿಗಳಾಗಿದ್ದ ದೇವೇಗೌಡರ ಕಾಲದಲ್ಲಿ ಜಪಾನ್‌ನಿಂದ ಸುಮಾರು 187 ಕೋಟಿ ರೂಪಾಯಿಗಳ ಸಹಾಯಧನವನ್ನು ಅಫಿಷಿಯಲ್ ಡೆವಲಪ್‌ಮೆಂಟ್ ಅಸಿಸ್ಟೆನ್ಸ್ ಎಂದು ಪಡೆದು ಮೈಸೂರು ಮಹಾರಾಜರ ಕಾಲದಲ್ಲಿ ನಿರ್ಮಾಣವಾದಂಥ ನೂರು ವರ್ಷದಿಂದ ಹಿಡುದು 800 ವರ್ಷದವರೆಗಿನ ಕೆನಾಲ್‌ಗಳು ಇದ್ದಾವೆ, ಅಂತಹದ್ದು 21 ಆಣೆಕಟ್ಟು ಎಂದು ಇದೆ. ಅದಕ್ಕೆ ಜಪಾನ್‌ನಿಂದ ಸುಮಾರು 187 ಕೋಟಿ ರೂಪಾಯಿಗಳನ್ನು ಪಡೆದು ಕಾಂಪ್ರೆಹೆನ್ಸೀವ್ ಸ್ಕೀಂ ಮಾಡಿ ಇಲ್ಲಿರತಕ್ಕ ಎರಡು ಲಕ್ಷ ಎಕರೆಗಳ ನಾಲೆಯನ್ನು ರಿನೋವೇಷನ್ ಹಾಗೂ ಮಾಡ್ರನೈಜೇಷನ್ ಮಾಡಬೇಕೆಂಬ ಆಲೋಚನೆಯನ್ನು ಇಟ್ಟುಕೊಂಡಿದ್ದೇವೆ. ನಮ್ಮ ಪ್ರಪೋಸಲನ್ನು ಯೂನಿಯನ್ ಗೌರ್ನಮೆಂಟ್‌ಗೆ ಕಳುಹಿಸಿಕೊಟ್ಟಿದ್ದೇವೆ. ಯೂನಿಯನ್ ಗೌರ್ನಮೆಂಟ್. ಮಿನಿಸ್ಟ್ರೀ ಆಫ್ ವಾಟರ್ ರಿಸೋರ್ಸ್‌ನವರು ನಮಗೆ ಮತ್ತೆ ಸ್ಪಷ್ಟೀಕರಣವನ್ನು ಕೇಳಿದೆ. ಆ ಸ್ಪಷ್ಟೀಕರಣವನ್ನು ನಾವು ಫಿಲಫ್ ಮಾಡುತ್ತಿದ್ದೇವೆ. ಆ ಸ್ಪಷ್ಟೀಕರಣವನ್ನೆಲ್ಲಾ ಫಿಲಪ್ ಮಾಡಿ ಜಪಾನ್‌ನಿಂದ 187 ಕೋಟಿ ರೂಪಾಯಿಗಳ ಸಹಾಯಧನವನ್ನು ತೆಗೆದುಕೊಂಡು ಬಂದು ನೂರರಿಂದ ಎಂಟನೂರು ವರ್ಷಗಳ ಇತಿಹಾಸವುಳ್ಳ, ಮೈಸೂರು ಮಹಾರಾಜರ ಕಾಲದಲ್ಲಿ ಆಗಿರತಕ್ಕಂಥ ಈ 21 ಆಣೆಕಟ್ಟುಗಳ ರಿನೋವೇಷನ್ ಹಾಗೂ ಮಾಡ್ರನೈಜೇಷನ್ ಮಾಡಿದರೆ ಸುಮಾರು ಎರಡು ಮೂರು ಜಿಲ್ಲೆಗಳಲ್ಲಿ ಅನುಕೂಲವಾಗುತ್ತದೆ ಎಂದು ಅಂದು ಕೊಂಡಿದ್ದೇವೆ. ಸಧ್ಯದಲ್ಲೇ ಜಪಾನಿನಿಂದ ಈ ಹಣ ದೊರೆಯುತ್ತದೆ ಎಂದು ನಾವು ಅಂದುಕೊಂಡಿದ್ದೇವೆ.

ಶ್ರೀ ಸಿ.ಎಸ್. ಪುಟ್ಟೇಗೌಡ : ಮಾನ್ಯ ಉಪಾಧ್ಯಕ್ಷರೆ, ಈ ಶ್ರೀರಾಮದೇವರ ನಾಲೆ ಎಂದು ನಮ್ಮ ಪ್ರಕಾಶ್‌ರವರು ಏನು ಕೇಳಿದರು ಅದು ನಮ್ಮ ಚನ್ನರಾಯಪಟ್ಟಣ ತಾಲ್ಲೂಕಿನ ಮೂಲಕವೂ ಸಹ ಹಾದುಹೋಗುತ್ತದೆ. ಅಲ್ಲಿನ ಜನರಿಂದ ಸುಮ್ಮನೆ ಕಂದಾಯವನ್ನು ವಸೂಲು ಮಾಡಿಕೊಳ್ಳುತ್ತಿದ್ದೀರಿ, ನಮ್ಮಲ್ಲಿರುವಂತಹದ್ದು ಗದ್ದೆ ಎಂದು ಟ್ರೀಟ್ ಮಾಡುತ್ತಿದ್ದೀರಾ? ಆದರೂ ಸಹ ನಮಗೆ ನೀರು ಬರುತ್ತಾ ಇಲ್ಲ. ಆ ಕಡೆ ಗಮನವನ್ನೇ ಹರಿಸಿಲ್ಲ ಎಂದು ಅಲ್ಲಿನ ಜನರ ಬೇಡಿಕೆ ಇದೆ. ದಯಮಾಡಿ ತಾವು ಅಲ್ಲಿನ ಜನರ ಸಮಸ್ಯೆಯನ್ನಾದರೂ ಆಲಿಸಿ ತಮ್ಮ ಮನಸ್ಸಿಗೆ ಅರ್ಥ ಮಾಡಿಕೊಳ್ಳುವ ಸಲುವಾಗಿ ಆ ಕ್ಷೇತ್ರದಲ್ಲಿ ಪ್ರವಾಸ ಮಾಡಬೇಕೆಂದು ನನ್ನ ಆಗ್ರಹ ಇದೆ. ಸುಮ್ಮನೆ ನಾವು ಇಲ್ಲಿ ಹೇಳಿಬಿಟ್ಟು ಕೈಬಿಟ್ಟರೆ ಜನರಿಗೆ ಅಲ್ಲಿ ನೇರವಾಗಿ ಸಿಗುವಂಥ ಶಾಸಕರದ್ದೂ ಬಹಳ ಸಮಸ್ಯೆ ಇದೆ. ದಯಮಾಡಿ ಇದು ತುರ್ತು ಕಾರ್ಯವೆಂದು ತಿಳಿದು, ಜನರಿಗೆ ಆಗಿರತಕ್ಕ ಹಿಂಸೆ ಎಂದು ತಿಳಿದು, ದಯಾಮಾಡಿ ಇದು ತುರ್ತು ಕಾರ್ಯವೆಂದು ತಿಳಿದು, ಜನರಿಗೆ ಆಗಿರತಕ್ಕ ಹಿಂದೆ ಎಂದು ತಿಳಿದು, ದಯಮಾಡಿ ಆ ಕ್ಷೇತ್ರಕ್ಕೆ ಬಂದು ಶ್ರೀರಾಮದೇವರ ನಾಲೆ, ಹೊಳೆನರಸೀಪುರ, ಚನ್ನರಾಯಪಟ್ಟಣ, ಕೆ.ಆರ್,

ಪೇಟೆ ಈ ಮೂರು ತಾಲ್ಲೂಕಿನಲ್ಲಿಯೂ ಹಾದುಹೋಗುವಂಥ ನಾಲೆಗಳನ್ನು ಶೀಘ್ರವಾಗಿ ಪರಿಶೀಲನೆ ಮಾಡಬೇಕೆಂದು ಅಧ್ಯಕ್ಷರ ಮೂಲಕ ಮಾನ್ಯ ಮಂತ್ರಿಗಳಲ್ಲಿ ಒತ್ತಾಯ ಮಾಡುತ್ತೇನೆ.

ಶ್ರೀ ಕೆ.ಎನ್. ನಾಗೇಗೌಡ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಪುಟ್ಟೇಗೌಡರು ಹೇಳುವಂಥ ವಿಚಾರ ಸತ್ಯ ಇದೆ. ಇದರಲ್ಲಿ ಶ್ರೀ ರಾಮದೇವರ ಉತ್ತರ ನಾಲೆ,ಮಂದಗೆರೆ ಎಡದಂಡೆ ನಾಲೆ, ಹೇಮಗಿರಿ ನಾಲೆಗಳಿಗೆ 50 ಕೋಟಿ ರೂಪಾಯಿಗಳ ಸಪರೇಟ್ ಎಸ್ಟಿಮೇಟ್ ಮಾಡಿ ರೆಡಿಯಾಗಿ ಇಟ್ಟುಕೊಂಡಿದ್ದೇವೆ. ಈ ಸಾರಿ ನಾವು ಅನುದಾನವನ್ನು ಕೊಟ್ಟಿಲ್ಲ. ಕೇವಲ 80 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ. 80 ಲಕ್ಷ ರೂಪಾಯಿಗಳಲ್ಲಿ 2 ಲಕ್ಷ ಎಕರೆಗೆ ಇರತಕ್ಕಂಥ ಈ ಹಳೆ ಕೆನಾಲ್‌ಗಳನ್ನು ರಿಪೇರಿ ಮಾಡುವುದಕ್ಕೆ ಸಾಧ್ಯವಿಲ್ಲ. ಅವರು ಹೇಳುವಂತಹದ್ದರಲ್ಲಿ ಅರ್ಥ ಇದೆ. ನಾನು ಈ ಅಧಿವೇಶನ ಮುಗಿದಮೇಲೆ ಸಂಪೂರ್ಣವಾಗಿ ನಮ್ಮ ಚೀಫ್ ಇಂಜಿನಿಯರ್, ಅಧಿಕಾರಿಗಳನ್ನು ಕರೆದುಕೊಂಡು ಹೋಗಿ ಅಸೆಸ್ ಮಾಡಿಸಿ, ಎಸ್ಟಿಮೇಟ್ ಮಾಡಿ, ಎಲ್ಲೆಲ್ಲಿ ವೀಕ್ ಪಾಯಿಂಟ್ ಇದೆ ಎಂಬುದನ್ನು ಐಡೆಂಟಿಫೈ ಮಾಡಿ ಒಂದು ಕಾಂಪ್ರೆಹೆನ್ಸೀವ್ ಸ್ಕೀಂ ಅನ್ನು ನಾವೇನು ಯೂನಿಯನ್ ಗೌರ್ನಮೆಂಟ್‌ಗೆ ಕಳುಹಿಸಿಕೊಟ್ಟಿದ್ದೇವೆ. 187 ಕೋಟಿ ರೂಗಳಿಗೆ ಅದು ಖಂಡಿತವಾಗಿ ಬರುತ್ತದೆ. ಈಗಾಗಲೇ ಎಲ್ಲಾ ರೀತಿಯ ವ್ಯವಹಾರಗಳು ಮುಗಿದಿದೆ. ನಮ್ಮ ಮುಖ್ಯಮಂತ್ರಿಗಳಿಂದಲೂ ಸಹ ಪ್ರಧಾನಮಂತ್ರಿಗಳಿಗೆ ಪತ್ರವನ್ನು ಬರೆಸುತ್ತೇನೆ. ಅದಕ್ಕೋಸ್ಕರವಾಗಿ ಆ ಫಾರ್ಮಲಿಟೀಸ್ ಮುಗಿದಮೇಲೆ ನಾನು ಮುಖ್ಯಮಂತ್ರಿಗಳನ್ನು ಕರೆದುಕೊಂಡುಹೋಗಿ ಪ್ರಧಾನಮಂತ್ರಿಗಳನ್ನು ಭೇಟಿ ಮಾಡಿ ಈ ಹಣವನ್ನು ನಾವು ಪಡೆದುಕೊಂಡರೆ ಎಂಟುನೂರು ವರ್ಷದ ಕೆನಾಲ್‌ಗಳನ್ನು ಸಂಪೂರ್ಣವಾಗಿ ಮಾಡ್ರನೈಜೇಷನ್ ಮಾಡುವುದಕ್ಕೆ ಸಾಧ್ಯವಾಗುತ್ತದೆ ಅಲ್ಲಿಯವರೆಗೆ ಸಹಕರಿಸಬೇಕೆಂದು ಪುಟ್ಟೇಗೌಡರಲ್ಲಿ ಕೇಳಿಕೊಳ್ಳುತ್ತೇನೆ.

ಗುಬ್ಬಿ ಕ್ಷೇತ್ರದ ನಿಟ್ಟೂರು ಹೋಬಳಿ ಪೋಲಿಸ್ ಠಾಣೆ ಮಂಜೂರಾತಿ

404 - ಶ್ರೀ ಜಿ.ಎಸ್. ಶಿವನಂಜಪ್ಪ (ಗುಬ್ಬಿ) : ಮಾನ್ಯ ಗೃಹ ಮತ್ತು ವಕ್ಫ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಗುಬ್ಬಿ ಕ್ಷೇತ್ರದ ನಿಟ್ಟೂರು ಹೋಬಳಿ ಕೇಂದ್ರವಾಗಿದ್ದು ಇಲ್ಲಿ ಅನೇಕ ಕಾರಣಗಳಿಂದ ಪದೇ ಪದೇ ಚಳುವಳಿ ನಡೆಯುತ್ತಿರುವುದು (ರಸ್ತೆ ತಡೆ - ಬೆಂಕಿ ಇಡುವುದು) ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಈ ಬಗ್ಗೆ ಸಾರ್ವಜನಿಕರು, ಶಾಸಕರು ನಿಟ್ಟೂರಿನಲ್ಲಿ ಪೋಲೀಸ್ ಠಾಣೆ ತೆರೆಯಬೇಕೆಂದು ಸುಮಾರು ವರ್ಷಗಳಿಂದ ಮನವಿ ಸಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಇ) *ಹಾಗಿದ್ದಲ್ಲಿ ಈ ಸಾಲಿನಲ್ಲಿ ಮಂಜೂರು ಮಾಡಲಾಗುತ್ತದೆಯೇ?*

ಶ್ರೀ ಆರ್. ರೋಷನ್ ಬೇಗ್ (ಗೃಹ ಮತ್ತು ವಕ್ಫ್ ರಾಜ್ಯ ಸಚಿವರು) :

ಅ) 1995ನೇ ಸಾಲಿನಲ್ಲಿ 4 ರಸ್ತೆ ತಡೆ ಪ್ರಕರಣಗಳು ವರದಿಯಾಗಿರುತ್ತದೆ.

ಆ) ಹೌದು.